O.S. ನಂಬರಃ 4/2019

ಪಿ. ಡಬ್ಲ್ಯೂಃ 1

ದಿಃ 23-01-2024 ರಂದು ಸಾಕ್ಷಿಯನ್ನು ಪುನ: ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

<u>ಪಾಟಿ ಸವಾಲುಃ 1,3,4,5 ಮತ್ತು 7 ನೇ ಪ್ರತಿವಾದಿಯರ ಪರ ಶ್ರೀಮತಿ ಎಸ್.ಎನ್.ಎಚ್. ವಕೀಲರಿಂದಃ</u>

ಭಾವಿಕೇರಿ ಗ್ರಾಮದ ಸರ್ವೇ ನಂ. 557/3 ವಿಸ್ತೀರ್ಣ 7-ಗುಂಟೆ ಜಮೀನಿನ ಕಬ್ಜೆಯನ್ನು ಹೊಂದಿ ವಹಿವಾಟಿ ಮಾಡುತ್ತಿದ್ದೇನೆ ಎಂದರೆ ಎಲ್ಲರೂ ಕಬ್ಜಾ ವಹಿವಾಟಿನಲ್ಲಿದ್ದಾರೆಂದು ಹೇಳುತ್ತಾರೆ. ಸದರಿ ಜಮೀನು ಸಹ ಕುಟುಂಬದ ಜಮೀನು ಎಂದರೆ ಸರಿ. ಸದರಿ ಜಮೀನನ್ನು ಈ ದಾವೆಯಲ್ಲಿ ಸೇರಿಸಿಲ್ಲ ಎಂದರೆ ಸಾಕ್ಷಿ ಎಲ್ಲರಿಗೂ ಸಮನಾಗಿರುವುದರಿಂದ ಸೇರಿಸುವ ಅವಶ್ಯಕತೆ ಉಂಟಾಗಿಲ್ಲ ಎಂದು ಹೇಳುತ್ತಾರೆ. ಭಾವಿಕೇರಿ ಗ್ರಾಮದ ಪಂಚಾಯಿತಿ ಮನೆ ನಂ. 922 ಇದೂ ಸಹ ನಮ್ಮ ಪಿತ್ರಾರ್ಜಿತ ಆಸ್ತಿ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಮನೆ ನಂ. 952 ನನ್ನ ಮನೆಗೆ ಸಂಬಂಧಿಸಿದ್ದು ಇದ್ದು, ಸರ್ವೇ ನಂ. 355/4 ರಲ್ಲಿದೆ ಎಂದು ಹೇಳುತ್ತಾರೆ. ಮನೆ ನಂ. 952 ರಲ್ಲಿ ನಾನು ಹಾಗೂ 1 ನೇ ಪ್ರತಿವಾದಿ ಅಕ್ಕಪಕ್ಕದಲ್ಲಿ ವಾಸಿಸುತ್ತಿದ್ದೇವೆ. ಸದರಿ ಮನೆಯನ್ನು ಈ ದಾವೆಯಲ್ಲಿ ಸೇರಿಸಿಲ್ಲ ಎಂದರೆ ತಂದೆ ಅವಧಿಯಲ್ಲಿ ನಾನು ಹಾಗೂ 1 ನೇ ಪ್ರತಿವಾದಿ ಅವನ್ನೆಲ್ಲಾ ಹಂಚಿಕೊಂಡಿದ್ದರಿಂದ ಸೇರಿಸಿಲ್ಲ, ಆದರೆ ಆ ಕುರಿತು ಪೋಡಿ ಆಗಿಲ್ಲ ಎಂದು ಹೇಳುತ್ತಾರೆ. ದಾವಾ ಆಸ್ತಿಗಳ ಸಂಖ್ಯೆ 3 ರಿಂದ 8 ಈ ದಾವೆಯಲ್ಲಿ ನಾನು ಸೇರಿಸಿಲ್ಲ

ಎಂದರೆ ಸರಿ. ದಾವೆಯಲ್ಲಿ ಏನು ಬರೆದಿದೆಯೆಂದು ಓದಿದ್ದೇನೆ. ಸದರಿ ಆಸ್ತಿಗಳನ್ನು ದಾವೆಯಲ್ಲಿ ಸೇರಿಸಿದ್ದೇನೆ ಎಂದರೆ ನನ್ನ ನೆನಪಿನಲ್ಲಿ ಇಲ್ಲ ಎಂದು ಹೇಳುತ್ತಾರೆ. ದಾವಾ ಆಸ್ತಿಗಳ ಸಂಖ್ಯೆ 1 ಮತ್ತು 2 ಎಂದು ತೋರಿಸಿದ ಆಸ್ತಿಗಳಲ್ಲಿ ಮಾತ್ರ ಭಾಗ ಕೇಳಲು ಈ ದಾವೆ ಸಲ್ಲಿಸಿದ್ದೇನೆ.

ನಾನು ಮಾದನಗೇರಿ, ಅಚವೆ, ಬಿಣಗಾ, ಮಾಜಾಳಿ ಹಾಗೂ ಕಾರವಾರದಲ್ಲಿ ಖಾಸಗಿ ಕೆಲಸ ಮಾಡಿದ್ದೇನೆ. ಕಳೆದ 25 ವರ್ಷಗಳಿಂದ ಭಾವಿಕೇರಿಯಲ್ಲಿ ವಾಸ್ತವ್ಯ ಮಾಡುತ್ತಿದ್ದೇನೆ. ನಾನು ಅಂದಾಜು 14-ವರ್ಷಗಳವರೆಗೆ ಮೇಲೆ ತಿಳಿಸಿದ ಸ್ಥಳಗಳಲ್ಲಿ ಅಲ್ಲಲ್ಲಿ ಕೆಲಸ ಮಾಡಿದ್ದೇನೆ. 2 ನೇ ಪ್ರತಿವಾದಿಯ ಗಂಡ ಸಹ ಅಂದಾಜು 30-ವರ್ಷಗಳವರೆಗೆ ಅಚವೆ, ಕೆಸವಳ್ಳಿಯಲ್ಲಿ ತೋಟಪಟ್ಟಿ ಮಾಡಿಕೊಂಡಿದ್ದ. ನಾನು ಹಾಗೂ 2 ನೇ ಪ್ರತಿವಾದಿಯ ಗಂಡ ಅಲ್ಲಲ್ಲಿ ಕೆಲಸಕ್ಕಿರುವುದರಿಂದ 1 ನೇ ಪ್ರತಿವಾದಿ ಕುಟುಂಬದ ಆಗುಹೋಗುಗಳನ್ನು ನೋಡಿಕೊಂಡು ಹೆಣ್ಣು ಮಕ್ಕಳ ಮದುವೆ ಹಾಗೂ ಇತರ ಕಾರ್ಯ ಮಾಡಿಕೊಂಡು ಬಂದಿದ್ದಾರೆ ಎಂದರೆ ಅದಕ್ಕೆಲ್ಲಾ ನಾವು ಕೂಡ ಹಣ ನೀಡಿ ಭಾಗವಹಿಸಿದ್ದೇವೆ ಎಂದು ಹೇಳುತ್ತಾರೆ. ನಾನು ಹಣ ನೀಡಿದ ಬಗ್ಗೆ ದಾಖಲೆ ಇಟ್ಟುಕೊಂಡಿಲ್ಲ ಎಂದರೆ ಮನೆ ಕಾರ್ಯಕ್ರಮಗಳಿಗೆ ನೀಡಿದ ಹಣಕ್ಕಾಗಿ ದಾಖಲೆ ಇರುವುದಿಲ್ಲವೆಂದು ಹೇಳುತ್ತಾರೆ.

2 ನೇ ಪ್ರತಿವಾದಿ ಗಂಡ ಕೆಸವಳ್ಳಿ ವ್ಯಾಪ್ತಿಯಲ್ಲಿ 8-ಎಕರೆ ಸರ್ಕಾರಿ ಪಡಾ ಜಮೀನನ್ನು ಮಾಡಲು ಕುಟುಂಬದ ಆಸ್ತಿಗಳಿಂದ ಸಹಾಯ ಸಹಕಾರ ಪಡೆದಿದ್ದಾನೆಂದರೆ ಮಾಹಿತಿ ಇಲ್ಲ. ಸದರಿ ಆಸ್ತಿಯನ್ನು ಈ ದಾವೆಯಲ್ಲಿ ಸೇರಿಸಿಲ್ಲ ಎಂದರೆ ತಂದೆಗೆ ಸಂಬಂಧಿಸಿದ ಆಸ್ತಿಯನ್ನು ಮಾತ್ರ ಸೇರಿಸಲಾಗಿದೆ ಎಂದು ಹೇಳುತ್ತಾರೆ. ಸದರಿ ಜಮೀನನ್ನು ಕುಟುಂಬದ ಉತ್ಪನ್ನದಿಂದಲೇ ಅಭಿವೃದ್ದಿಪಡಿಸಿರುವುದರಿಂದ ಈ ದಾವೆಯಲ್ಲಿ ಸೇರಿಸಬೇಕಾಗುತ್ತದೆ ಎಂದರೆ ಸಾಕ್ಷಿ ಯಾವ ಹಣದಿಂದ ಅಭಿವೃದ್ಧಿಪಡಿಸಿರುತ್ತಾರೆಂದು ನನಗೆ ಮಾಹಿತಿ ಇಲ್ಲ ಎಂದು ಹೇಳುತ್ತಾರೆ. ದಾವಾ ಆಸ್ತಿಗಳಲ್ಲಿ ಅ.ನಂ. 1 ಮತ್ತು 2 ಎಂದು ಗುರುತಿಸಿದ ಆಸ್ತಿಗಳ ಕುರಿತಾಗಿ ನಾನು ಮತ್ತು 2 ನೇ ಪ್ರತಿವಾದಿ ಗಂಡ 1 ನೇ ಪ್ರತಿವಾದಿಯ ಹೆಸರಿನಲ್ಲಿ ಹಕ್ಕು ಬಿಡುಗಡೆ ಮಾಡಿಕೊಟ್ಟಿರುತ್ತೇವೆ ಎಂದರೆ ಸರಿಯಲ್ಲ. ನನ್ನ ಸಂಸಾರದ ಅಡಚಣೆಗೆಂದು 1 ನೇ ಪ್ರತಿವಾದಿ ಬಳಿ ನಾನು ಆಗಾಗ ಹಣ ಪಡೆದಿರುತ್ತೇನೆಂದರೆ ಸರಿಯಲ್ಲ. 2 ನೇ ಪ್ರತಿವಾದಿ ಗಂಡ ಕೆಸವಳ್ಳಿಯ ಜಮೀನು ಅಭಿವೃದ್ಧಿ ಸಲುವಾಗಿ ಹಣ ಪಡೆದಿದ್ದ ಹಾಗೂ ನಾನು ನನ್ನ ಸಂಸಾರದ ಅಡಚಣೆಗೆಂದು ಹಣ ಪಡೆದು 1 ನೇ ಪ್ರತಿವಾದಿಗೆ ಹಕ್ಕು ಬಿಟ್ಟುಕೊಟ್ಟಿರುತ್ತೇವೆ ಎಂದರೆ ಸರಿಯಲ್ಲ.

(ಮುಂದಿನ ಪಾಟಿ ಸವಾಲನ್ನು ವಿನಂತಿ ಮೇರೆಗೆ ಮುಂದೂಡಲಾಯಿತು.)

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಗಿದೆ.)

ಓ ಹೇ ಕೇ ಸರಿ ಇದೆ.

ಸಿವಿಲ್ ನ್ಯಾಯಾಧೀಶರು, ಅಂಕೋಲಾ.